KACN320006292024

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ,**
**ಕೊಳ್ಳೇಗಾಲ.**

**ದಿನಾಂಕಃ 20 ನೇ ಫೆಬ್ರವರಿ  2026**

**ಉಪಸ್ಥಿತರು**

ಶ್ರೀಮತಿ. ಕಾವ್ಯಶ್ರೀ ಎಂ. ಬಿ.ಎ., ಎಲ್.ಎಲ್.ಬಿ.,
ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ .

**ಅಸಲು ದಾವಾ ಸಂಖ್ಯೆ 64/2024**

**ವಾದಿ** : ಶ್ರೀ. ಎಸ್. ಮಹದೇವಸ್ವಾಮಿ  ಬಿನ್ ಲೇಟ್ ಎಂ. ಎಸ್. ಸಿದ್ದಪ್ಪ,
ಸುಮಾರು 56 ವರ್ಷಗಳು,
**ವಾಸಃ** ಲಿಂಗಾಯಿತ ಬೀದಿ, ಮುಳ್ಳೂರು ಗ್ರಾಮ,
ಕಸಬಾ ಹೋಬಳಿ, ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ.ಎಂ. ಎಸ್ .ಕೆ., ವಕೀಲರು)**

**ವಿರುದ್ದ/-**

**ಪ್ರತಿವಾದಿ** : ಶ್ರೀಮತಿ. ಶಾಂತಮ್ಮ ಕೋಂ ಲೇಟ್ ಎಂ. ಎಸ್. ಸಿದ್ದಪ್ಪ,
ಸುಮಾರು 65 ವರ್ಷ,
**ವಾಸಃ** ಅಂಬಾ ಮಂದಿರ ಎದುರು ,
ಕಾವೇರಿ ರಸ್ತೆ ಹತ್ತಿರ, ಕೊಳ್ಳೇಗಾಲ ಪಟ್ಟಣ,
ಚಾಮರಾಜನಗರ ಜಿಲ್ಲೆ.

**(ಪ್ರತಿವಾದಿಯರ ಪರ ಶ್ರೀ.ಜೆ.ಪಿ., ವಕೀಲರು)**

-:**<u>ಮಧ್ಯಂತರ ಅರ್ಜಿ ಸಂಖ್ಯೆ-1ರ ಪಕ್ಷಗಾರರ ಸ್ಥಾನಮಾನ</u>**:-

ಅರ್ಜಿದಾರರು : ಮಹದೇವಸ್ವಾಮಿ.ಎಸ್

……. ವಾದಿ

**- ವಿರುದ್ಧ -**

ಎದುರುದಾರರು: ಶ್ರೀಮತಿ. ಶಾಂತಮ್ಮ

……. ಪ್ರತಿವಾದಿ

-:**<u>ಮಧ್ಯಂತರ ಅರ್ಜಿ ಸಂಖ್ಯೆ-4ರ ಪಕ್ಷಗಾರರ ಸ್ಥಾನಮಾನ</u>**:-

ಅರ್ಜಿದಾರರು : ಶ್ರೀಮತಿ. ಶಾಂತಮ್ಮ

……. ಪ್ರತಿವಾದಿ

**- ವಿರುದ್ಧ -**

ಎದುರುದಾರರು: ಮಹದೇವಸ್ವಾಮಿ.ಎಸ್

……. ವಾದಿ

| | | |
|---|---|---|
| *i* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ 39 ನಿಯಮ 1 ಮತ್ತು 2<br>ಸಿ. ಪ್ರ. ಸಂ. ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 |
| *ii* | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ತಾತ್ಕಾಲಿಕ ತಡೆಯಾಜ್ಞೆ ಆದೇಶವನ್ನು ಕೋರಿ |
| *iii* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | ***13.02.2024* ಮತ್ತು *25.06.2024*** |
| *iv* | ಮಧ್ಯಂತರ ಅರ್ಜಿಯ ಸಂಖ್ಯೆ | **ಮಧ್ಯಂತರ ಅರ್ಜಿ ಸಂಖ್ಯೆಃ 1 ಮತ್ತು 4** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | ***25.06.2024* ಮತ್ತು *23.09.2024*** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ | ***20.02.2026*** |

| | | |
|---|---|---|
| | ದಿನಾಂಕಃ | |

**<u>ಅರ್ಜಿದಾರರುಗಳು ದಾಖಲು ಮಾಡಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ಮತ್ತು 4 ರ ಮೇಲಿನ ಆದೇಶ</u>**

ಅರ್ಜಿದಾರರು/ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1ನ್ನು ದಾಖಲು ಮಾಡಿ, ಪ್ರತಿವಾದಿಗಳು ಯಾವುದೇ ರೀತಿಯಲ್ಲಿ ಅಡ್ಡಿಯನ್ನುಂಟು ಪಡಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಕೋರಿಕೊಂಡಿರುತ್ತಾರೆ.

2. ಅರ್ಜಿದಾರರು/ ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 1ರ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ ವಾದಿಯು ಪ್ರತಿವಾದಿಯ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ದಾಖಲು ಮಾಡಿದ್ದು ವಾದ ಪತ್ರದಲ್ಲಿನ ಸಂಗತಿಗಳನ್ನು ಪ್ರಮಾಣ ಪತ್ರಿಕೆಯ ಜೊತೆ ಪರಿಗಣಿಸಬೇಕೆಂದು ಕೋರಿಕೊಂಡಿರುತ್ತಾರೆ. ಮುಂದುವರೆದು ವಾದಿಯ ತಂದೆ ದಾವಾ ಅನುಸೂಚಿತ ಸ್ವತ್ತಿನ ಸರ್ವೆ ನಂ. 26 ವಿಸ್ತೀರ್ಣ 6 ಸೆಂಟ್ ಪೂರ್ವ-ಪಶ್ಚಿಮ 40 ಅಡಿ ಮತ್ತು ದಕ್ಷಿಣ-ಉತ್ತರ 60 ಅಡಿ ಸ್ವತ್ತನ್ನು ದಿನಾಂಕಃ 05.10.1970 ರಂದು ಪೂರ್ವ ಮಾಲೀಕರರಾದ ವಿ. ಗೋವಿಂದಶೆಟ್ಟಿ ರವರ ಮಕ್ಕಳಾದ ಜಿ.ವೆಂಕಟಾಪತಿ ಮತ್ತು ಜಿ. ನಾಗರಾಜು ರವರು ಸ್ವತ್ತನ್ನು ಕ್ರಯಕ್ಕೆ ಪಡೆದುಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ಸ್ವತ್ತಿನ ವಿಸ್ತೀರ್ಣ 6 ಸೆಂಟ್ ಆಗಿದ್ದು ಪೂರ್ವ-ಪಶ್ಚಿಮ 40 ಅಡಿ ಮತ್ತು ಉತ್ತರ-ದಕ್ಷಿಣ 60 ಅಡಿಗಳು ಖಾಲಿ ನಿವೇಶನಗಳಾಗಿರುತ್ತವೆ. ಮುಂದುವರೆದು ವಾದಿಯ ತಂದೆ ಎಂ. ಎಸ್. ಸಿದ್ದಪ್ಪ ರವರಿಗೆ ಬಸವಣ್ಣ, ಮಹದೇವಸ್ವಾಮಿ, ನಂದಿನಿ, ಹಾಗೂ ನಾಗೇಂದ್ರ ಎಂಬ ನಾಲ್ಕು ಜನ ಮಕ್ಕಳುಗಳು ಇದ್ದು, ವಾದಿಯ ತಂದೆ ಜೀವಿತಾ ಕಾಲದಲ್ಲಿಯೇ 1998-99 ರಂದು ದಾವಾ ಅನುಸೂಚಿತ ಸ್ವತ್ತಿನ್ನು ಒಟ್ಟು ಕಟುಂಬದ ಸದಸ್ಯರ ಮೇರೆಗೆ ವಾದಿಗೆ ನೀಡಿರುತ್ತಾರೆ. ಆದ್ದರಿಂದ ಸದರಿ ಸ್ವತ್ತು ಮಾಲತಃ ವಾದಿಯ ಹೆಸರಿಗೆ ನಮೂದು ಆಗಿರುತ್ತದೆ. ಸ್ವತ್ತನ್ನು ಒಪ್ಪಿಗೆ ಮೂಲಕ ಪಡೆದು ವಾದಿಯ ದಾವಾ ಅನುಸೂಚಿತ ಸ್ವತ್ತಿಗೆ ಕಂದಾಯ ಪಾವತಿ ಮಾಡಿಕೊಂಡು ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ. ದಿನಾಂಕಃ29.11.2023 ರಂದು ಪ್ರತಿವಾದಿ ಮತ್ತು ಆವರ ಸಂಬಂಧಿಕರು ಕಾನೂನು ಬಾಹಿರವಾಗಿ ಸ್ವತ್ತಿನಲ್ಲಿ ಪ್ರವೇಶ ಮಾಡಿ ಯಾವುದೇ ಹಕ್ಕು , ಹಿತಾಸಕ್ತಿ ಇಲ್ಲದೇ ಇದ್ದರೂ ವಾದಿಯ ಸಾಧೀನಾನುಭವಕ್ಕೆ ಅಡ್ಡಿಯನ್ನುಂಟು ಪಡಿಸಿರುತ್ತಾರೆ ಹಾಗೂ ಪ್ರತಿವಾದಿಗಳು ಮತ್ತು ಅವರ ಸಂಬಧಿಕರು ಗೂಂಡಾ ಪ್ರವೃತ್ತಿವುಳ್ಳವರಾಗಿದ್ದು ವಾದಿಯ ಸ್ವಾಧೀನಾನುಭವಕ್ಕೆ ಕಾನೂನು ಬಾಹಿರವಾಗಿ ಅಡ್ಡಯನ್ನುಂಟು ಪಡಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ವಾದಿಯ ದಾವಾ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭಕ್ಕೆ ಧಕ್ಕೆಯನ್ನುಂಟು ಪಡಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

3. ಪ್ರತಿವಾದಿಯು ನ್ಯಾಯಾಲಯ ಸಮಕ್ಷಮ ಹಾಜರಾಗಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿಕೊಂಡಿದ್ದು ಅದರಲ್ಲಿರುವ ಸಂಗತಿಗಳನ್ನು ಸದರಿ ಅರ್ಜಿಗೆ ತಕರಾರು ಎಂಬುದಾಗಿ ಕೋರಿಕೊಂಡಿರುತ್ತಾರೆ. ಅದರಂತೆ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿಯ ವಾದ ಪತ್ರದಲ್ಲಿನ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಕೊಳ್ಳೇಗಾಲ ತಾಲ್ಲೂಕು, ಕಸಬಾ ಹೋಬಳಿ, ಕೊಳ್ಳೇಗಾಲದಲ್ಲಿರುವ ವಿಶ್ವಬ್ರಹ್ಮಂ ಜಾತಿ ಸಿದ್ದಚಾರಿ @ ಸಿದ್ದಪ್ಪರವರ ಮಗ ಎಂ. ಎಸ್. ಸಿದ್ದಪ್ಪರವರಿಗೆ ಕೊಳ್ಳೇಗಾಲ ತಾಲ್ಲೂಕು, ತೆಲಗ ಬಣಜಿಗ ಜಾತಿ ವಿ. ಗೋವಿಂದಶೆಟ್ಟರ ಮಕ್ಕಳು ವೆಂಕಟಪತಿ.ಜಿ, ನಟರಾಜು.ಜಿ ರವರು ದಿನಾಂಕಃ 04.05.1969 ರಲ್ಲಿ ಒಂದು ಕ್ರಯದ ಒಪ್ಪಂದದ ಕರಾರನ್ನು ಮಾಡಿಕೊಂಡು ಸದರಿ ಕ್ರಯದ ಒಪ್ಪಂದದ ಕರಾರಿನ ಒಟ್ಟು ಮೊತ್ತ ರೂ. 1,800/- ಗಳಾಗಿದ್ದು ಮುಂಗಡವಾಗಿ ರೂ. 350/- ಗಳನ್ನು ಪಾವತಿಸಿ ಉಳಿಕೆ ರೂ.1,500/- ಗಳನ್ನು ಮಾಸಿಕ 350/-ರಂತೆ ಪಾವತಿಸುವಂತೆ ಕರಾರು ಆಗಿದ್ದು ಅದರಂತೆ ಕೊಳ್ಳೇಗಾಲ ಸಬ್ ಡಿವಿಷನ್‌ಗೆ ಸೇರಿದ ಬಸ್ತೀಪುರ ಗ್ರಾಮದಲ್ಲಿರುವ ಸರ್ವೆ ನಂ. 25/ಎ, 25/ಬಿ, 26, 27 ಸ್ವತ್ತುಗಳಲ್ಲಿ ಪೂರ್ವ-ಪಶ್ಚಿಮ 40 ಅಡಿಗಳು ಉತ್ತರ-ದಕ್ಷಿಣ 60 ಅಡಿಗಳುಳ್ಳ ನಿವೇಶನ 54ನ್ನು ಕ್ರಯದ ಮೂಲಕ ಪಡೆದುಕೊಂಡು ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ಎಂ. ಎಸ್. ಸಿದ್ದಪ್ಪರವರು ದಿನಾಂಕಃ 03.03.1989 ರಂದು ಮರಣ ಹೊಂದಿದ್ದು ಅನಂತರ ವಾರಸ್ಸುದಾರರಾದ ಅವರ ಮಕ್ಕಳು ಸ್ವತ್ತಿನ ಸ್ವಾಧೀನಾನುಭವ ಹೊಂದಿ ಕಂದಾಯ ಪಾವತಿಸಿಕೊಂಡು ಬಂದಿರುತ್ತಾರೆ. ದಾವಾ ಅನುಸೂಚಿತ ಸ್ವತ್ತು ಕೊಳ್ಳೇಗಾಲ ಪಟ್ಟಣದ ನಗರಸಭೆಯಲ್ಲಿ ಖಾತೆ ಸಂಖ್ಯೆಃ 975 ಆಗಿದ್ದು ಅದರ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಅಡಿ ಉತ್ತರ-ದಕ್ಷಿಣ 60 ಅಡಿಗಳು ಆಗಿದ್ದು ಸದರಿ ಸ್ವತ್ತು 6 ಸೆಂಟ್ ಪ್ರದೇಶ ಆಗಿರುವುದಿಲ್ಲ. ಕೇವಲ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವೆಯನ್ನು ದಾಖಲು ಮಾಡಿರುತ್ತಾರೆ. ಪ್ರತಿವಾದಿಗಳು ತಿಳಿಸಿದಂತೆ ಹಕ್ಕು ವರ್ಗಾವಣೆ ನಡವಳಿಯು ಕಾನೂನು ಬಾಹಿರ ಆಗಿರುವ ದಿನಾಂಕಃ 28.01.2024 ರಂದು ಪ್ರತಿವಾದಿ ಸ್ವತ್ತಿನ ಸ್ವಾಧೀನಾನುಭವದಲ್ಲಿ ಕಲ್ಲು ಕಂಬವನ್ನು ಹಾಕುತ್ತಿದ್ದ ಸಮಯದಲ್ಲಿ ವಾದಿ ತೀಟೆ ಜಗಳ ತೆಗೆದು ಅತಿಕ್ರಮ ಪ್ರವೇಶ ಮಾಡಿ ತಮಗೆ ಹಣ ನೀಡುವಂತೆ ಒತ್ತಾಯ ಮಾಡಿದ ಕಾರಣ ಪ್ರತಿವಾದಿ ಕೇವಿಯಟ್ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ವಾದಿಯು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

4. ಮುಂದುವರೆದು ಪ್ರತಿವಾದಿ ನ್ಯಾಯಾಲಯ ಸಮಕ್ಷಮ ಹಾಜರಾಗಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 4ನ್ನು ದಾಖಲು ಮಾಡಿ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿಯನ್ನುಂಟು ಪಡಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿಕೊಂಡಿರುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ ದಾವಾ ಅನುಸೂಚಿತ ಸ್ವತ್ತು ಅರ್ಜಿದಾರರ ಪತಿಯಾದ ಎಂ.ಎಸ್. ಸಿದ್ದಪ್ಪ ಬಿನ್ ಲೇಟ್ ಸಿದ್ದಚಾರಿಯವರು ದಿನಾಂಕಃ 04.05.1969 ರಂದು ವಿ. ಗೋವಿಂದಶೆಟ್ಟಿ ರವರ ಮಕ್ಕಳುಗಳಾದ ಜಿ. ವೆಂಕಟಪತಿ, ಜಿ. ನಟರಾಜು ರವರಿಂದ ಕ್ರಯ ಒಪ್ಪಂದ ಕರಾರನ್ನು ಮಾಡಿಕೊಂಡು ತದ ನಂತರ ಒಪ್ಪಂದದ ಕರಾರನ್ನು ಪೂರ್ಣಗೊಳಿಸಿ ಸದರಿ ಸ್ವತ್ತನ್ನು ದಿನಾಂಕಃ 05.10.1970 ರಂದು ವಿ. ಗೋವಿಂದಶೆಟ್ಟಿ ಮತ್ತು ಮಕ್ಕಳುಗಳಾದ ಜಿ. ವೆಂಕಟಪತಿ ಮತ್ತು ಜಿ. ನಟರಾಜು ರವರಿಂದ ಶುದ್ದ ಕ್ರಯಕ್ಕೆ ಪಡೆದುಕೊಂಡು ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ ಅರ್ಜಿದಾರರ ಪತಿ ಎಂ.ಎಸ್ ಸಿದ್ದಪ್ಪ ಬಿನ್ ಲೇಟ್ ಸಿದ್ದಚಾರಿಯವರು ದಿನಾಂಕ 04.05.1969 ನೇ ಸಾಲಿನಲ್ಲಿ ವಿ. ಗೋವಿಂದಶೆಟ್ಟಿರವರ ಮಕ್ಕಳುಗಳಾದ ವೆಂಕಟಾಪತಿ. ಜಿ ಮತ್ತು ನಟರಾಜ್.ಜಿ ರವರಿಂದ ಕ್ರಯದ ಒಪ್ಪಂದದ ಕರಾರು ಮಾಡಿಕೊಂಡು ಆನಂತರ ದಿನಾಂಕ 5-10-19 70 ರಂದು ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ. ಅಂದಿನಿಂದ ಅರ್ಜಿದಾರರ ಪತಿ ಸಿದ್ದಪ್ಪರವರೇ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ. ಅರ್ಜಿದಾರರ ಪತಿ ಸಿದ್ದಪ್ಪರವರು ದಿನಾಂಕ 03-03-1989ರಂದು ಮರಣ ಹೊಂದಿದ್ದು, ಅನಂತರ ಅರ್ಜಿದಾರರ ಹೆಸರಿಗೆ ಖಾತೆ ನಮೂದಾಗಿರುತ್ತದೆ. ಅರ್ಜಿದಾರರು 2012 ರಿಂದ 2024 ರವರೆಗೆ ಕಂದಾಯ ಪಾವತಿ ಮಾಡಿಕೊಂಡು ಸ್ವತಿನ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಪ್ರತಿವಾದಿಗೆ ದಾವಾ ಅನುಸೂಚಿತ ಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲದೆ ಇದ್ದರೂ ಸಹ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ವಾದಿಯ ಪ್ರತಿವಾದಿಯ ಸ್ವಾದೀನಾನುಭವಕ್ಕೆ ಧಕ್ಕೆಯನ್ನುಂಟು ಪಡಿಸಿರುತ್ತಾರೆ. ಆದ್ದರಿಂದ ಪ್ರತಿವಾದಿಯ ಶಾಂತಿಯುತ ಸ್ವಾಧೀನಕ್ಕೆ ಅಡ್ಡಿಯನ್ನುಂಟು ಪಡಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿಕೊಂಡಿರುತ್ತಾರೆ.

5. ವಾದಿಯೂ ಮೇಲ್ಕಂಡ ಅರ್ಜಿಗೆ ತಮ್ಮ ತಕರಾರನ್ನು ದಾಖಲು ಮಾಡಿದ್ದು ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಕಾನೂನಾತ್ಮಕವಾಗಲಿ, ವಾಸ್ತವಿಕವಾಗಲಿ ಊರ್ಜಿತವಲ್ಲವೆಂದು ತಿಳಿಸಿರುತ್ತಾರೆ. ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಅನುಸೂಚಿತ ಸ್ವತಿಗೆ ಸಂಬಂಧಿಸಿದಂತೆ ಶಾಶ್ವತ ಕಾರ್ಯ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಅರ್ಜಿದಾರರು ಕೇವಲ ದಾವಾ ಸ್ವತ್ತನ್ನು ಪಟ್ಟಾಯಿಸುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ವಾದಿಯು ತನ್ನ ಪತಿಯ ಹೆಸರು ಎಂ. ಎಸ್. ಸಿದ್ದಪ್ಪ ಎಂಬುದಾಗಿ ಸೃಷ್ಟಿಸಿಕೊಂಡಿರುತ್ತಾರೆ ಹಾಗೂ ಸದರಿಯವರು ಜಿ. ವೆಂಕಟಪತಿ ಮತ್ತು ಜಿ. ನಟರಾಜು ರವರಿಂದ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂಬುದು ಸಹ ಸುಳ್ಳಿನಿಂದ ಕೂಡಿರುತ್ತದೆ.

ಮುಂದುವರಿದು ಪ್ರತಿವಾದಿಗಳು ತಾವು ವಿವರಿಸಿರುವ ಸ್ವತ್ತಿಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ದಾಖಲಾತಿಗಳನ್ನು ನ್ಯಾಯಾಲಯದ ಸಮಕ್ಷಮ ಒದಗಿಸಿರುವುದಿಲ್ಲ. ದಿನಾಂಕಃ 05.10.1970 ರಲ್ಲಿ ಒಂದು ಕಾಲ್ಪನಿಕ ದಿನಾಂಕವನ್ನು ತಿಳಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

6. ಅರ್ಜಿದಾರರುಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ಮತ್ತು 4ಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ಅರ್ಜಿದಾರರುಗಳ ಅರ್ಜಿಯ ನ್ಯಾಯೋಚಿತ ವಿಲೇಗಾಗಿ ಈ ಕೆಳಕಂಡ ಪ್ರಶ್ನೆಗಳು ಉದ್ಭವವಾಗಿರುತ್ತವೆ.

**:: ಅಂಶಗಳು ::**

1. ತಾತ್ಕಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ವಾದಿ ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ತೋರ್ಪಡಿಸಿದ್ದಾರೆಯೇ ?

2. ಅನುಕೂಲತೆಯ ಒಲವು ವಾದಿಗಳ ಪರವಾಗಿದೆಯೇ ?

3. ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ?

4. ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 4 ರ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿನ ಅರ್ಜಿಯು ಈ ದಾವೆಯಲ್ಲಿ ಉರ್ಜಿತವಾಗಿದೆ ಎಂಬುದಾಗಿ ರುಜುವಾತು ಪಡಿಸುವರೇ?

5. ಯಾವ ಆದೇಶ ?

7. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮಕ್ಷಮ ಇರುವ ದಾಖಲೆಗಳನ್ನು ಕೂಲಕುಂಷವಾಗಿ ಪರಿಶೀಲಿಸಲಾಯಿತು. ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| ಅಂಶ -1 | : | ಸಕರಾತ್ಮಕವಾಗಿ |
| ಅಂಶ -2 | : | ಸಕರಾತ್ಮಕವಾಗಿ |
| ಅಂಶ -3 | : | ಸಕರಾತ್ಮಕವಾಗಿ |
| ಅಂಶ -4 | : | ನಕರಾತ್ಮಕವಾಗಿ |
| ಅಂಶ -5 | : | ಅಂತಿಮ ಆದೇಶದಂತೆ, |

**:: ಕಾರಣಗಳು ::**

8. **ಅಂಶ-1 ರಿಂದ 3**:- ಅಂಶ-1 ರಿಂದ 3 ಒಂದನ್ನೊಂದು ಅವಲಂಬಿಸಿದ್ದು, ಹಾಗು ಅವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದ ಚರ್ಚೆ ವಿಮರ್ಶೆ ಅವಶ್ಯಕತೆ ಇರುತ್ತದೆ. ಆದುದರಿಂದ, ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ, ಈ ಎಲ್ಲಾ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ವಾದಿಯು ಪ್ರತಿವಾದಿಯ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿಯನ್ನುಂಟು ಪಡಿಸದಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ.

ವಾದಿಯು ಪ್ರತಿವಾದಿಯ ವಿರುದ್ಧ ದಾವಾ ಅನುಸೂಚಿತ ಸ್ವತ್ತು ಕೊಳ್ಳೇಗಾಲ ಟೌನ್, ಬಸ್ತೀಪುರ ಗ್ರಾಮದ ಸರ್ವೇ ನಂಬರ್ 26 /1 ರ 6 ಸೆಂಟ್ ಪೂರ್ವ -ಪಶ್ಚಿಮ 40ಅಡಿ ಉತ್ತರ-ದಕ್ಷಿಣ 60 ಅಡಿಗಳ ಪೂರ್ವಕ್ಕೆ ಎಸ್. ಎನ್. ಗಂಗಾಧರ ಮೂರ್ತಿಯವರ ಸ್ವತ್ತು, ಪಶ್ಚಿಮಕ್ಕೆ ಬಿ. ವಿ. ಅಶ್ವತ್ ನಾರಾಯಣ ಶೆಟ್ಟಿರವರ ಸ್ವತ್ತು ಉತ್ತರಕ್ಕೆ ಎನ್. ಡಿ. ಶ್ರೀನಿವಾಸ ಶೆಟ್ಟಿಗೆ ರವರ ಸ್ವತ್ತು, ದಕ್ಷಿಣಕ್ಕೆ ರಸ್ತೆ ಈ ಮಧ್ಯೆ ಇರುವ ಸ್ವತ್ತು ತನ್ನ ತಂದೆ ಕ್ರಯಕ್ಕೆ ಪಡೆದಿದ್ದು ಆನಂತರ ಒಟ್ಟು ಕುಟುಂಬದ ಸದಸ್ಯರ ಒಪ್ಪಿಗೆಯ ಮೇರೆಗೆ ಸದರಿ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದಾಗಿ ತಿಳಿಸಿರುತ್ತಾರೆ. ಪ್ರತಿವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೆ ಇದ್ದರೂ ಸಹ ಸದರಿ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿಯನ್ನುಂಟುಪಡಿಸುತ್ತಿರುವ ಕಾರಣ ತಾತ್ಕಾಲಿಕ ನಿರ್ಬಂಧ ಕಾಜ್ಞೆಯನ್ನು ಆದೇಶಿಸುವಂತೆ ಕೋರಿ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

9. ಪ್ರತಿವಾದಿಗಳು ನ್ಯಾಯಾಲಯದ ಸಮಕ್ಷಮ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿ ಮುಂದುವರೆದು ಸದರಿ ಪ್ರತಿವಾದ ಪತ್ರದಲ್ಲಿ ಕೊಳ್ಳೇಗಾಲ ತಾಲ್ಲೂಕು, ಕೊಳ್ಳೇಗಾಲ ಪಟ್ಟಣದ ಬಸ್ತೀಪುರ ಖಾತೆ ಸಂಖ್ಯೆ 975 ಪೂರ್ವ-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 60 ಅಡಿಗಳುಳ್ಳ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧ ಕಾಜ್ಞೆಯನ್ನು ಕೋರಿಕೊಂಡಿರುತ್ತಾರೆ. Para ಈ ದಾವೆಯಲ್ಲಿ ದಾವಾ ಅನುಸೂಚಿತ ಸರ್ವೆ ನಂಬರ್ 26/1ರ ವಿಸ್ತೀರ್ಣ 6 ಸೆಂಟ್ ಹಾಗೂ ನಿವೇಶನ ಸಂಖ್ಯೆ 975 ವಿಸ್ತೀರ್ಣ ಪೂರ್ವ-ಪಶ್ಚಿಮ 40 ಅಡಿಗಳು ಉತ್ತರ-ದಕ್ಷಿಣ 60 ಅಡಿಗಳ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಾರರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿಕೊಂಡಿರುತ್ತಾರೆ. ಆ ನಿಟ್ಟಿನಲ್ಲಿ ನ್ಯಾಯಾಲಯದ ಸಮಕ್ಷಮ ಉಭಯ ಪಕ್ಷಗಾರರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ವಾದಿಯು ತನ್ನ ವಾದವನ್ನು ಮಂಡಿಸುತ್ತಾ ತನ್ನ ತಂದೆ ಸಿದ್ದಪ್ಪರವರು ಬಸ್ತಿಪುರ ಗ್ರಾಮದ ಸರ್ವೆ ನಂ. 26/1 ರ ವಿಸ್ತೀರ್ಣ 6 ಸೆಂಟ್ ಪೂರ್ವ-ಪಶ್ಚಿಮ 40 ಅಡಿ ಉತ್ತರ-ದಕ್ಷಿಣ 60 ಅಡಿಗಳ ನಿವೇಶನವನ್ನು ನಾನು ಕ್ರಯಕ್ಕೆ ಪಡೆದಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಸದರಿ ಸಂಗತಿಯನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ನ್ಯಾಯಾಲಯದ ಸಮಕ್ಷಮ ದಿನಾಂಕ 05-10-1970ರ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲು ಹಾಗೂ ದಿನಾಂಕ 5-10-1970ರ ಅಸಲು ಕ್ರಯಪತ್ರವನ್ನು ನ್ಯಾಯಾಲಯ

ಸಮಕ್ಷಮ ಹಾಜರು ಪಡಿಸಿಕೊಂಡಿರುತ್ತಾರೆ. ಸದರಿ ಕ್ರಯ ಪತ್ರಗಳು ಒಂದೇ ದಾಖಲಾತಿಯಾಗಿದ್ದು ಒಂದು ಅಸಲು ಮತ್ತು ಮತ್ತೊಂದು ದೃಢೀಕೃತ ನಕಲು ಆಗಿರುತ್ತದೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಗಿ ದಿನಾಂಕ 05-10-1970ರ ಸಿದ್ದಪ್ಪರವರ ದತ್ತು ಮಕ್ಕಳಾದ ಎಂ. ಎಸ್. ಸಿದ್ದಪ್ಪ ಅವರು ತೆಲುಗು ಬಲಜಿಗ ಜಾತಿಯ ಗೋವಿಂದಶೆಟ್ಟಿರವರ ಮಕ್ಕಳು ಜಿ.ವೆಂಕಟಾಪತಿ ಮತ್ತು ಜಿ. ನಟರಾಜರವರುಗಳಿಂದ ಬಸ್ತಿಪುರ ಗ್ರಾಮದಲ್ಲಿರುವ ಸರ್ವೆ ನಂಬರ್ 26ನೇ ಸ್ವತ್ತಿನ ಪೈಕಿ ಪೂರ್ವಕ್ಕೆ ಗಂಗಾಧರಮೂರ್ತಿರವರಿಗೆ ಕ್ರಯವಾಗಿರುವ ಭೂಮಿ, ಪಶ್ಚಿಮಕ್ಕೆ ಬಿ. ವಿ. ಅಶ್ವತ್ ನಾರಾಯಣ ಶೆಟ್ಟಿರವರಿಗೆ ಕ್ರಯವಾಗಿರುವ ಭೂಮಿ, ದಕ್ಷಿಣಕ್ಕೆ 3ನೇ ನಂಬರ್ ರೋಡು, ಉತ್ತರಕ್ಕೆ ಎನ್.ಡಿ. ಶ್ರೀನಿವಾಸ ಶೆಟ್ಟಿರವರಿಗೆ ಕ್ರಯವಾಗಿರುವ ಭೂಮಿಯ ಮಧ್ಯ ಭಾಗದಲ್ಲಿರುವ ಪೂರ್ವ- ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 60 ಅಡಿ ಸುಮಾರು 6 ಸೆಂಟ್ ಉಳ್ಳ ಭೂಮಿಯನ್ನು ನೋಂದಾಯಿತ ಕ್ರಯ ಪತ್ರದಂತೆ ಕ್ರಯಕ್ಕೆ ಪಡೆದುಕೊಂಡಿರುವುದಾಗಿ ಕಂಡುಬರುತ್ತಿದೆ.

10. ಅದರಂತೆ ಎಂ. ಸಿದ್ದಪ್ಪನವರ ಮಗ ಎಂ. ಎಸ್. ಸಿದ್ದಪ್ಪ ರವರು ಬಸ್ತೀಪುರ ಗ್ರಾಮದ ಸರ್ವೆ ನಂಬರ್ 26/1ರ ವಿಸ್ತೀರ್ಣ 6 ಸೆಂಟ್ಸ್ ಸ್ವತ್ತನ್ನು ದಿನಾಂಕ 05-10-1970ರ ಕ್ರಯಪತ್ರದಂತೆ ಕ್ರಯಕ್ಕೆ ಪಡೆದುಕೊಂಡಿರುವುದು ಕಂಡುಬರುತ್ತಿದೆ. ಸದರಿ ಸ್ವತ್ತು ವಾದಿಗೆ ಒಟ್ಟು ಕುಟುಂಬದ ಸದಸ್ಯರ ಒಪ್ಪಿಗೆಯ ಮೇರೆಗೆ ಬಂದಿರುವುದಾಗಿ ತಿಳಿಸಿದ್ದು, ಆ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ, ಆದರೆ ವಾದಿಯೂ ಹಾಜರುಪಡಿಸಿರುವ ಹಕ್ಕು ಬದಲಾವಣೆ ವಹಿ 2013-2014 ಹಾಗೂ 2018-19, 2023-24ರ ಪಹಣಿ ಪತ್ರಿಕೆಗಳಲ್ಲಿ ಬಸ್ತಿಪುರ ಗ್ರಾಮದ ಸರ್ವೆ ನಂಬರ್ 26/1ರ ವಿಸ್ತೀರ್ಣ 6 ಸೆಂಟ್ ಸ್ವತ್ತು ಮಹಾದೇವ ಸ್ವಾಮಿ ಬಿನ್ ಎಂ. ಎಸ್. ಸಿದ್ದಪ್ಪ ಅವರ ಹೆಸರಿನಲ್ಲಿ ನಮೂದಾಗಿರುವುದು ಕಂಡುಬಂದಿರುತ್ತದೆ.

11. ಮುಂದುವರೆದು ವಾದಿಯು ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 01-04-1976 ರಿಂದ 19-12-2023 ರವರೆಗಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳನ್ನು ನೀಡಿದ್ದು, ಸದರಿ ಪ್ರಮಾಣ ಪತ್ರಗಳಲ್ಲಿ ಸದರಿ 26ನೇ ಸರ್ವೇ ನಂಬರ್ 6 ಸೆಂಟ್ ಸ್ವತ್ತಿನಲ್ಲಿ ಯಾವುದೇ ವ್ಯವರರಣೆಗಳು ನಡೆದಿಲ್ಲ ಎಂಬುದು ಕಂಡು ಬರುತ್ತಿದೆ. ಮುಂದುವರಿರೆದು ವಾದಿಯೂ ಬಸ್ತಿಪುರ ಗ್ರಾಮದ ಸರ್ವೇ ನಂಬರ್ 26/1 ರ ಸ್ವತ್ತಿಗೆ ಸಂಬಂಧಿಸಿದಂತೆ ಪಟ್ಟಾ ಪುಸ್ತಕವನ್ನು ಹಾಜರು ಪಡಿಸಿದ್ದು 2004 ರ ಪಟ್ಟಾ ಪುಸ್ತಕವಾಗಿದ್ದು ಖಾತೆ ನಂಬರ್ 113 ಆಗಿರುತ್ತದೆ. ಸದರಿ 113 ಸ್ವತಿಗೆ ಸಂಬಂಧಿಸಿದಂತೆ 2004 ರಲ್ಲಿ ವಾದಿಯು ಕಂದಾಯವನ್ನು ಸಹ ಪಾವತಿ ಮಾಡಿರುವುದು ಕಂಡುಬರುತ್ತಿದೆ. ಈ ಹಂತದಲ್ಲಿ ವಾದಿಯು ಬಸ್ತೀಪುರ ಗ್ರಾಮದ ಸರ್ವೆ ನಂಬರ್ 26/1, 6 ಸೆಂಟ್ಸ್ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದು ಮೇಲ್ನೋಟಕ್ಕೆ

ಕಂಡುಬರುತ್ತಿದೆ. ಆದರೆ ಪ್ರತಿವಾದಿಯು ವಾದಿಯು ನಿರೂಪಿಸಿರುವ ಸ್ವತ್ತು ತನ್ನ ಪತಿಗೆ ಸೇರಿದ್ದು ತನ್ನ ಪತಿ ಅದನ್ನು ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ಅವರ ನಂತರ ತಾನು ಸ್ವತ್ತಿನ ಸ್ವಾದೀನಾನುಭವದಲ್ಲಿ ಇರುವುದಾಗಿ ಸಂಗತಿಗಳನ್ನು ನಿರೂಪಿಸಿರುತ್ತಾರೆ.

12. ಪ್ರತಿವಾದಿಯೂ ತನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಖಾತೆ ಸಂಖ್ಯೆ 975ರಲ್ಲಿ ಸ್ವಾಧೀನಾಭವದಲ್ಲಿರುವುದರಿಂದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆದುಕೊಂಡಿರುತ್ತಾರೆ. ಆ ನಿಟ್ಟಿನಲ್ಲಿ ವಾದಿಯು ತನ್ನ ಪತಿಗೆ ಆದ ಕ್ರಯದ ಕರಾರನ್ನು ಹಾಜರುಪಡಿಸಿದ್ದು, ಸದರಿ ಕ್ರಯದ ಕರಾರು ದಿನಾಂಕ 04-05-1969ರ ದಾಖಲಾತಿ ಆಗಿರುತ್ತದೆ. ಅದರಂತೆ ಸಿದ್ಧಾಚಾರಿಯವರ ಮಕ್ಕಳಾದ ಎಂ.ಎಸ್ ಸಿದ್ಧಪ್ಪರವರು ಅವರು ಗೋವಿಂದಶೆಟ್ಟಿ ಮಕ್ಕಳುಗಳಾದ ಜಿ. ವೆಂಕಟಾಪತಿ ಮತ್ತು ಜಿ. ನಟರಾಜು ರವರಿಂದ ಬರೆಸಿಕೊಂಡ ಕ್ರಯದ ಕರಾರು ಆಗಿದ್ದು ಸದರಿ ಕ್ರಯದ ಕರಾರಿನಂತೆ ಬಸ್ತೀಪುರ ಗ್ರಾಮದ ಸರ್ವೆ ನಂಬರ್ 25ಎ, 25 ಬಿ, 26 ಮತ್ತು 27 ಕಾಲೆಗಳ ಪೈಕಿ ಪೂರ್ವಕ್ಕೆ , ಪಶ್ಚಿಮಕ್ಕೆ 53ನೇ ಸೈಟು, ಪಶ್ಚಿಮಕ್ಕೆ 53ನೇ ಸೈಟು, ದಕ್ಷಿಣಕ್ಕೆ 3ನೇ ನಂಬರ್ ರೋಡು, ಉತ್ತರಕ್ಕೆ 42ಸೈಟ್ ಈ ಮಧ್ಯದಲ್ಲಿರುವ 54 ಸೈಟಿಗೆ ಪೂರ್ವ-ಪಶ್ಚಿಮ 40 ಉತ್ತರ-ದಕ್ಷಿಣ 60 ಅಡಿಗಳ ಸ್ವತ್ತಿಗೆ ಸಂಬಂಧಿಸಿದಂತೆ ಕರಾರು ಮಾಡಿಕೊಟ್ಟಿರುವುದು ಕಂಡುಬರುತ್ತದೆ. ಸದರಿ ಕರಾರಿನಂತೆ ದಿನಾಂಕ 05-10-1970 ರಂದು ಕ್ರಯಪತ್ರವಾಗಿರುವುದಾಗಿ ವಾದಿಯೂ ಹಾಜರುಪಡಿಸಿರುವ ದಿನಾಂಕ 05-10-1970ರ ಕ್ರಯ ಪತ್ರದ ದೃಢೀಕೃತ ನಕಲನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಪತ್ರದಲ್ಲಿ ಈಗಾಗಲೇ ತಿಳಿಸಿದಂತೆ ವೀರಶೈವ ಜಾತಿ ಸಿದ್ದಪ್ಪನವರ ದತ್ತು ಮಕ್ಕಳಾದ ಎಂ. ಎಸ್. ಸಿದ್ದಪ್ಪ ರವರು ಅವರು ಸ್ವತ್ತನ್ನು ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತಿದೆ.

13. ಪ್ರತಿವಾದಿಯೂ ತನ್ನ ಪತಿ ಸಿದ್ಧಪ್ಪರ ವರಿಗೆ ಕ್ರಯ ಪತ್ರವಾಗಿದ್ದು ಅದರಂತೆ ದಿನಾಂಕ 05-10-1970ರಂದು ಕ್ರಯಪತ್ರವಾಗಿರುವುದಾಗಿ ತಿಳಿಸಿರುತ್ತಾರೆ. ಆದರೆ, ***ದಿನಾಂಕ 04-05-1969ರ ಕ್ರಯದ ಕರಾರಿನಲ್ಲಿ "ಕೊಳ್ಳೇಗಾಲದಲ್ಲಿರುವ ವಿಶ್ವಬ್ರಹ್ಮ ಜಾತಿ ಸಿದ್ಧಾಚಾರಿ ಅವರ ಮಕ್ಕಳು ಎಂ.ಎಸ್ ಸಿದ್ದಪ್ಪ ಎಂಬುದಾಗಿ ನಮೂದಾಗಿದ್ದು"*** ಪ್ರತಿವಾದಿ ಹಾಜರು ಪಡಿಸಿರುವ ದಿನಾಂಕ ***05-10-1970ರ ನೋಂದಾಯಿತ ಕ್ರಯ ಪತ್ರದಲ್ಲಿ ಮುಳ್ಳೂರು ಗ್ರಾಮದಲ್ಲಿರುವ ವೀರಶೈವ ಜಾತಿ ಆರಂಭ ಜೀವನ ಸಿದ್ದಪ್ಪ ಅವರ ದತ್ತು ಮಕ್ಕಳಾದ ಎಂ. ಎಸ್. ಸಿದ್ದಪ್ಪ*** ಎಂಬುದಾಗಿ ಕಂಡುಬರುತ್ತಿದೆ. ಸದರಿ ಎರಡೂ ದಾಖಲಾತಿಗಳಲ್ಲಿರುವ ಎಂ.ಎಸ್ ಸಿದ್ದಪ್ಪರವರು ಎಂಬುವರು ಪ್ರತ್ಯೇಕ ವ್ಯಕ್ತಿಗಳಾಗಿರುತ್ತಾರೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಅದರಂತೆ, ಈ ಎರಡು ದಾಖಲಾತಿಗಳು ಅಂದರೆ, ದಿನಾಂಕ 04.05.1969 ರ ಕ್ರಯದ ಕರಾರು ಹಾಗೂ ದಿನಾಂಕ 05-10-1970ರ ನೋಂದಾಯಿತ ಕ್ರಯ ಪತ್ರಗಳು ಎರಡು ಕ್ರಯಪತ್ರಗಳು ಒಬ್ಬನೇ ವ್ಯಕ್ತಿಗೆ ಸೇರಿದ ದಾಖಲಾತಿಗಳಾಗಿರುದಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

14. ಅದೇ ರೀತಿಯಾಗಿ, ಪ್ರತಿವಾದಿಯು ತಮ್ಮ ಸ್ವತ್ತಿಗೆ ಸಂಭಂದಿಸಿದ್ದು ಎಂಬುದಾಗಿ ಸಂಗತಿಗಳನ್ನು ನಿರೂಪಿಸಿ ನ್ಯಾಯಾಲಯದ ಸಮಕ್ಷಮ ದಿನಾಂಕ 05.10.1970 ರ ಕ್ರಯ ಪತ್ರದ ದೃಡೀಕೃತ ದಾಖಲಾತಿಯನ್ನು ಹಾಜರುಪಡಿಸಿರುತ್ತಾರೆ. ಆದರೆ, ವಾದಿಯು ಸದರಿ ಕ್ರಯಪತ್ರದ ಅಸಲು ಪ್ರತಿಯನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುತ್ತಾರೆ. ಅದರಂತೆ, ಈ ಹಂತದಲ್ಲಿ ವಾದಿಯು ಅಸಲು ನೊಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿ ಮೇಲ್ನೋಟಕ್ಕೆ ಸದರಿ ದಾಖಲಾತಿಯನ್ನು ಅವರ ತಂದೆಯೇ ಕ್ರಯಕ್ಕೆ ಪಡೆದಿರುತ್ತಾರೆ ಎಂಬುದಾಗಿ ಈ ಹಂತದಲ್ಲಿ ಮೇಲ್ನೋಟಕ್ಕೆ ರುಜುವಾತು ಪಡಿಸಿರುತ್ತಾರೆ.

15. ಮುಂದುವರೆದು, ವಾದಿಯು ಹಾಜರುಪಡಿಸಿರುವ ದಾಖಲಾತಿಗಳಂತೆ ವಾದಿಯು ಸರ್ವೆ ನಂಬರ್ ಬಸ್ತಿಪುರ ಗ್ರಾಮದ ಸರ್ವೆ ನಂಬರ್ 21/6 ರಲ್ಲಿ ಸ್ವತ್ತಿನ ಸ್ವಾಧೀನಾನುಭವದಲ್ಲಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಅದಕ್ಕೆ ವಿರುದ್ಧವಾಗಿ ಪ್ರತಿವಾದಿಗಳು ಸದರಿ ಸ್ವತ್ತು ನಗರಸಭೆಯ ವ್ಯಾಪ್ತಿಗೆ ಸೇರಿದ್ದು, ನಿವೇಶನವಾಗಿ ಪರಿವರ್ತನೆಗೊಂಡಿದ್ದು ಅದರ ನಿವೇಶನ ಸಂಖ್ಯೆ 975 ಆಗಿರುತ್ತದೆ ಎಂಬುದಾಗಿ ನಿವೇಶನ ಸಂಖ್ಯೆ 975ಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿ ಹಾಜರುಪಡಿಸಿರುವ ಸ್ವಯಂಘೋಷಿತ ತೆರಿಗೆ ರಿಜಿಸ್ಟರ್ ಮತ್ತು ಕಂದಾಯದ ರಶೀದಿಗಳಲ್ಲಿ ನಿವೇಶನ ಸಂಖ್ಯೆ 975 ಎಂಬುದಾಗಿ ನಮೂದಾಗಿದ್ದರೂ, ಸದರಿ ನಿವೇಶನ ಸರ್ವೆ ನಂಬರ್ 26/1ರ ಸ್ವತ್ತಿನಲ್ಲಿಯೇ ಮಾಡಲಾಗಿದೆ ಅಥವಾ ರೂಪಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ. ಅದರಂತೆ ಸದರಿ ನಿವೇಶನ ಪ್ರತಿವಾದಿಯೂ ತಿಳಿಸಿರುವ ಸರ್ವೆ ನಂಬರ್ 975 ನಿವೇಶನವು ಬಸ್ತೀಪುರ ಗ್ರಾಮದ ಸರ್ವೆ ನಂಬರ್ 26/1ರ ನಿವೇಶನದಲ್ಲಿ ಸ್ವತ್ತಿನಲ್ಲಿ ರೂಪಿಸಲಾಗಿದೆ ಎಂಬುದರ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯವಿಲ್ಲದೆ ಇರುವ ಕಾರಣ ಸದರಿ 26/1 ಸ್ವತ್ತು ಹಾಗೂ ಪ್ರತಿವಾದಿ ನಿರೂಪಿಸಿರುವ ನಿವೇಶನಗಳು ಒಂದೇ ಎಂಬುದಾಗಿ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುವುದಿಲ್ಲ. ಈಗಾಗಲೇ, ಈ ಮೇಲ್ಕಂಡತೆ ಚರ್ಚಿಸಿದಂತೆ, ವಾದಿಯ ತಂದೆಯು ಸರ್ವೆ ನಂ 26/1ರಲ್ಲಿ 60*40 ವಿಸ್ತೀರ್ಣದ ಸ್ವತ್ತನ್ನು ಕ್ರಯಕ್ಕೆ ಪಡೆದು, ಅವರ ನಂತರ ವಾದಿಯು ಸ್ವತ್ತಿನ ಸ್ವಾಧೀನಾನುಭದಲ್ಲಿ ಇರುವುದಾಗಿ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತಿದೆ.

16. ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಸ್ವಾದೀನಾನುಭವದಲ್ಲಿ ಇರುವುದು ಕಂಡು ಬರುತ್ತಿದೆ. ಈ ಹಂತದಲ್ಲಿ ಒಂದು ವೇಳೆ ವಾದಿಯ ಪರವಾಗಿ ನಿರ್ಭಂದಕಾಜ್ಞೇಯನ್ನು ಆದೇಶಿಸದೇ ಇದ್ದಲ್ಲಿ, ಪ್ರತಿವಾದಿಯು ವಾದಿಯ ಶಾಂತಿಯುತ ಸ್ವಾದೀನಾನುಭವಕ್ಕೆ ದಕ್ಕೆಯನ್ನುಂಟು ಪಡಿಸುತ್ತಾರೆ ಎಂಬ ಸಂಗತಿಯನ್ನು ಅಲ್ಲಗಳೆಯಲು ಬರುವುದಿಲ್ಲ.

ಮುಂದುವರೆದು, ಅದರಿಂದ, ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ ಎಂಬುದು ಸಹ ಕಂಡು ಬರುತಿದೆ. **ಆದ್ದರಿಂದ ಅಂಶ 1ರಿಂದ ಅಂಶ-3ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**17. ಅಂಶ-4:-** ಈ ದಾವೆಯಲ್ಲಿ ಪ್ರತಿವಾದಿಯು ಮಧ್ಯಂತರ ಅರ್ಜಿ ಸಂಖ್ಯೆ4 ನ್ನು ದಾಖಲು ಮಾಡಿ, ನಿವೇಶನ ಸಂಖ್ಯೆ 975ಕ್ಕೆ ಸಂಬಂಧಿಸಿದಂತೆ ವಾದಿಯು ಯಾವುದೇ ರೀತಿಯಲ್ಲಿಯೂ ಸಹ ಪ್ರತಿವಾದಿಯ ಸ್ವಾದೀನಾನುಭವಕ್ಕೆ ದಕ್ಕೆಯನ್ನುಂಟು ಪಡಿಸದಂತೆ ತಾತ್ಕಾಲಿಕ ನಿರ್ಭಂದಕಾಜ್ಞೇಯನ್ನು ಕೋರಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಸದರಿ ಈ ನ್ಯಾಯಾಲಯದ ಸಮಕ್ಷಮ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಪರಿಶೀಲಿಸಲಾಗಿ, ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1 ರಡಿಯಲ್ಲಿ ತಮ್ಮ ಪ್ರತಿವಾದಪತ್ರವನ್ನು ಸಲ್ಲಿಸಿರುತ್ತಾರೆ. ಅದರಂತೆ, ಪ್ರತಿವಾದಿಯು ವಾದಿಯು ಸಲ್ಲಿಸಿರುವ ವಾದವಪತ್ರಕ್ಕೆ ತಮ್ಮ ತಕರರನ್ನು ಸಲ್ಲಿಸಿಕೊಂಡಿರುತ್ತಾರೆ. ಆದರೆ, ಸದರಿ ಪ್ರತಿವಾದಪತ್ರದ ಕೊನೆಯ ಪುಟದಲ್ಲಿ, ಕೊಳ್ಳೇಗಾಲ ತಾಲ್ಲೂಕು ಬಸ್ತಿಪುರದ ನಿವೇಶನ ಸಂಖ್ಯೆ 975 ಕ್ಕೆ ಸಂಬಂಧಿಸಿದಂತೆ ಶಾಶ್ವತ ನಿರ್ಭಂದಕಾಜ್ಞೇಯನ್ನು ಕೋರಿಕೊಂಡಿರುತ್ತಾರೆ. ಆದರೆ, ತಮ್ಮ ಪ್ರತಿವಾದಪತ್ರದಲ್ಲಿ ಪ್ರತಿ ಹಕ್ಕನ್ನು ಕೋರಿಕೊಂಡಿರುವುದಿಲ್ಲ ಹಾಗೂ ಪ್ರತಿವಾದಪತ್ರದಲ್ಲಿ ಕೋರಿಕೊಂಡಿರುವ ಪರಿಹಾರಕ್ಕೆ ನ್ಯಾಯಾಲಯದ ಶುಲ್ಕವನ್ನು ಸಹ ಪಾವತಿ ಮಾಡಿರುವುದಿಲ್ಲ.

18. ಮುಂದುವರೆದು, ಪ್ರತಿವಾದಿಯು ಅರ್ಜಿಯನ್ನು ಸಲ್ಲಿಸಿರುವುದನ್ನು ಪುಷ್ಟಿಕರಿಸಿಕೊಂಡು ಶಂಕುಂತಲಮ್ಮ ಮತ್ತು ಇತರರು ವಿರುದ್ದ ಕಾಂತಮ್ಮ ಮತ್ತು ಇತರರು ಪ್ರಕರಣವನ್ನು ಉಲ್ಲೇಖಿಸಿರುತ್ತಾರೆ. ಸದರಿ ಪ್ರಕರಣದ ಖಂಡಿಕೆ 33 ರಂತೆ,

***33. The correct legal position as is clear from the statutory provision is as under:***

***(I) Both the plaintiff and the defendant can maintain an application under Order XXXIX Rule 1(a) of the Code for the reliefs set out in the said provision;***

***(ii) Insofar as relief under Order XXXIX Rule 1(b) and (c) is concerned, such a relief is available only***

*to the plaintiff and the defendant cannot maintain an application for the said reliefs in a suit filed by the plaintiff, irrespective of the fact that his right to such relief arises either from the same cause of action or a cause of action that arises subsequent to the filing of the suit.*

*However it is open to the defendant to maintain a separate suit against the plaintiff and seek relief provided under the Order. 39 Rule 1(b) and (c) of the Code.*

*(iii) In cases which do not fall under Order XXXIX Rule 1 of the Code, the Court has the inherent jurisdiction to grant the relief of injunction in its discretion, if it is satisfied that such an order is necessary to meet the ends of justice or to prevent abuse of process of the court and nothing in this Code shall limit or otherwise affect such inherent power of the court.*

*Accordingly, we answer the question of law referred to for our consideration in the negative.*

ಎಂಬುದಾಗಿ ತಿಳಿಸಿದ್ದು, ಅದರಂತೆ, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1(a)ರಡಿಯಲ್ಲಿ ಮಾತ್ರವೇ ಪ್ರತಿವಾದಿಯು, ವಾದಿಯ ದಾವೆಯಲ್ಲಿ ತಾತ್ಕಲಿಕ ನಿರ್ಭಂದಕಾಜ್ಞೇಯನ್ನು ಕೋರಿ ಅರ್ಜಿಯನ್ನು ದಾಖಲು ಮಾಡಬಹುದಾಗಿರುತ್ತದೆ. ಆದರೆ,

ವಾದಿಯ ದಾವೆಯಲ್ಲಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1(b) ಮತ್ತು (c) ರಡಿಯಲ್ಲಿನ ಪರಿಹಾರ ಕೋರಿ ಅರ್ಜಿಯನ್ನು ದಾಖಲು ಮಾಡಲು ಬರುವುದಿಲ್ಲ ಎಂಬುದಾಗಿರುತ್ತದೆ. ಈ ದಾವೆಯಲ್ಲಿನ ಸಂಗತಿಗಳನ್ನು ಗಮನಿಸಲಾಗಿ, ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಪ್ರತಿಹಕ್ಕನ್ನು ಸಹ ಕೋರಿಕೊಂಡಿರುವುದಿಲ್ಲ, ಹಾಗೂ ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ಶಾಶ್ವತ ನಿರ್ಭಂದಕಾಜ್ಞೇಯನ್ನು ಕೋರಿಕೊಂಡಿರುವುದಕ್ಕೆ ನ್ಯಾಯಾಲಯದ ಶುಲ್ಕವನ್ನು ಸಹ ಭರಿಸಿರುವುದಿಲ್ಲ. ಹಾಗಾಗಿ, ಈ ದಾವೆಯಲ್ಲಿ ಪ್ರತಿವಾದಿ ಪ್ರತಿಹಕ್ಕನ್ನು ಕೋರಿಕೊಂಡಿರುವುದಿಲ್ಲ ಹಾಗೂ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1(a)ರಡಿಯಲ್ಲಿ ಅರ್ಜಿಯನ್ನು ದಾಖಲುಮಾಡದೇ ಇರುವ ಕಾರಣ ಪ್ರತಿವಾದಿಗೆ ವಾದಿಯ ದಾವೆಯಲ್ಲಿ ಮಧ್ಯಂತರ ಅರ್ಜಿಯಂತೆ ತಾತ್ಕಲಿಕ ನಿರ್ಭಂದಕಾಜ್ಞೇಯನ್ನು ಕೋರಿ ಅರ್ಜಿಯನ್ನು ದಾಖಲು ಮಾಡಲು ಬರುವುದಿಲ್ಲ, ಆದ ಕಾರಣದಿಂದಾಗಿ, ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 4 ಉರ್ಜಿತವಾಗಿರುವುದಿಲ್ಲ. **ಆದ್ದರಿಂದ ಅಂಶ 4ನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.**

19. **ಅಂಶ-5** :- ಮೇಲ್ಕಂಡಂತೆ ಅಂಶ 1 ರಿಂದ 4 ರಲ್ಲಿ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆಃ-

-: **ಆದೇಶ** :-

ಅರ್ಜಿದಾರರು/ವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿನ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರು/ ಪ್ರತಿವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 4 ನ್ನು ಈ ಮೂಲಕ ತಿರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರಗಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 20.02.2025 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.

For order by 20.02.2026

PCJ & JMFC., KOLLEGAL.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು.)**

-: **ಆದೇಶ** :-

ಅರ್ಜಿದಾರರು/ವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರು/ ಪ್ರತಿವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 4 ನ್ನು ಈ ಮೂಲಕ ತಿರಸ್ಕರಿಸಲಾಗಿದೆ.

**(ಕಾವ್ಯಶ್ರೀ ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

For Issues by 23.03.2026.

PCJ & JMFC., KOLLEGAL.

Case called out. While preparing order, it is observed by this court that defendant filed their written statement on 07.09.2023. On same day stage fixed for objection to IA. But defendant have not filed objection to IA. Even defendant has not filed memo by adopting contents of written statement. But, the counsel for defendant has advanced his argument on IA. Hence, before pronouncing order it is necessary to clarify the same. Call on 08.01.2025.

IV ACJ & JMFC., Hassan.